ಅನುಬಂಧ–1

ತಹಶೀಲ್ದಾರ್ ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳು

350 (623); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೊರತೆ ಇರುವ ಸಿಬ್ಬಂದಿಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಖಾಲಿ ಇರುವ ಹುದ್ದೆಗಳ ವಾರು ವಿವರ ಒದಗಿಸುವುದು)

ಆ) ಕಂದಾಯ ಇಲಾಖೆಯ ವತಿಯಿಂದ ಜಾರಿಯಲ್ಲಿರುವ ಹೊಸ ಯೋಜನೆಗಳಾವುವು? ಸಾರ್ವಜನಿಕರಿಗೆ ಅವುಗಳಿಂದಾಗುವ ಉಪಯೋಗಗಳೇನು? (ಯೋಜನೆವಾರು ವಿವರ ಒದಗಿಸುವುದು)

ಶ್ರೀ ವಿ.ಶ್ರೀನಿವಾಸಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ.

ರಾಯಭಾಗ ತಹಶೀಲ್ದಾರ್ ಕಚೇರಿಯಲ್ಲಿ ಖಾಲಿ ಇರುವ

ಹುದ್ದೆಗಳ ವಿವರ:

1	ಗ್ರೇಡ್–2 ತಹಶೀಲ್ದಾರ್	01
2	ಶಿರಸ್ತೇದಾರ	03
3	ಪ್ರ.ದ.ಸ.	02
4	ಕಂದಾಯ ನಿರೀಕ್ಷಕ	02
5	ಆಹಾರ ನಿರೀಕ್ಷಕ	01
6	ಗ್ರಾಮಲೆಕ್ಕಾಧಿಕಾರಿ	08

ಸದರಿ ಹುದ್ದೆಗಳಲ್ಲಿ ಗ್ರೇಡ್ –2 ತಹಶೀಲ್ದಾರ್ ಹುದ್ದೆಯನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಶಿರಸ್ತೇದಾರ ಹುದ್ದೆಗಳನ್ನು ಭರ್ತಿಮಾಡಲು ಪ್ರಾದೇಶಿಕ ಆಯುಕ್ತರ ಹುದ್ದೆಗಳನ್ನು ಭರ್ತಿಮಾಡಲು

ಪ್ರಾದೇಶಿಕ ಆಯುಕ್ತರ ಕಾರ್ಯಾಲಯದಿಂದ ಕ್ರಮ ಜರುಗಿಸಲಾಗುತ್ತಿದೆ. 2014–15 ನೇ ಸಾಲಿನ ಸಾಮಾನ್ಯ ವರ್ಗಾವಣೆಯಲ್ಲಿ ಖಾಲಿ ಇರುವ 02 ಪ್ರದಸ ಹುದ್ದೆಗಳ ಪೈಕಿ 01 ಹುದ್ದೆಯನ್ನು ಹಾಗೂ 02 ಕಂದಾಯ ನಿರೀಕ್ಷಕರ ಹುದ್ದೆಗಳನ್ನು ಮತ್ತು 06 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಭರ್ತಿಮಾಡಲಾಗಿದೆ ಹಾಗೂ ಖಾಲಿ ಇರುವ ಆಹಾರ ನಿರೀಕ್ಷಕರ ಹುದ್ದೆಯನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿ ಬೆಳಗಾವಿ ಜಿಲ್ಲೆ ಇವರಿಂದ ಕ್ರಮ ಜರುಗಿಸಲಾಗುತ್ತಿದೆ.

ಆ) 1) ಮನಸ್ವಿನಿ ಯೋಜನೆ

ಸರ್ಕಾರದ ಆದೇಶ ಸಂ: ಆರ್‌ಡಿ:94:ಎಸ್‌ಪಿ:2013

ದಿ: 01.08.2013 ರಡಿ ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿನ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ ಮಾಸಿಕ ₹ 500/– ರಂತೆ ನೀಡುವ ಯೋಜನೆಯಾಗಿದ್ದು, ಈ ಯೋಜನೆಯು ದಿನಾಂಕ 01.08.2013 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯಿಂದ ಸಾಮಾಜಿಕ/ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಲಾಗುತ್ತಿದೆ.

2) ಮೈತ್ರಿ ಯೋಜನೆ

ಸರ್ಕಾರದ ಆದೇಶ ಸಂ: ಆರ್‌ಡಿ:95ಡಿಎಸ್‌ಎಪಿ:2013 ದಿನಾಂಕ 01.08.2013 ರಂತೆ ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿನ ಲಿಂಗತ್ವ ಅಲ್ಪಸಂಖ್ಯಾತರಿಗೆ ಮಾಸಿಕ ₹ 500/– ರಂತೆ ನೀಡುವ ಮಾಶಾಸನ ಯೋಜನೆಯು ದಿನಾಂಕ 01.08.2013 ರಿಂದ ಜಾರಿಗೆ ಬಂದಿದ್ದು, ಸದರಿ ಯೋಜನೆಯಿಂದ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ (ಹಿಜ್ರಾಗಳು, ಕೋಥಿಗಳು, ಜೋಗಪ್ಪಂದಿರು, ಮಂಗಳಮುಖಿಯರು) ಸಹಾಯ ನೀಡುವ ಕುರಿತು ಹಾಗೂ ಲಿಂಗತ್ವ ಅಲ್ಪಸಂಖ್ಯಾತರನ್ನು

ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸದರಿ ಯೋಜನೆಯು ಸಹಾಯಕವಾಗಿದೆ.

3) ಆಮ್ ಆದ್ಮಿ ಭೀಮಾ ಯೋಜನೆ

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭೂರಹಿತ ಕುಟುಂಬಗಳಿಗೆ ಜೀವ ವಿಮೆ ಒದಗಿಸುವ ಯೋಜನೆಯಾಗಿದ್ದು, ಈ ಯೋಜನೆಯು ದಿ: 01.04.2013 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯು ಪ್ರಿಮಿಯಂ ಮೊತ್ತ ₹ 200/– ನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಮವಾಗಿ ಭರಿಸುತ್ತವೆ. ಸದರಿ ಯೋಜನೆಯಿಂದ 18 ರಿಂದ 59 ವರ್ಷದೊಳಗಿನ ಬಿಪಿಎಲ್ ಕಾರ್ಡ ಹೊಂದಿರುವ ಭೂ ರಹಿತ ಕುಟುಂಬಗಳ ಮುಖ್ಯಸ್ಥರಿಗೆ ಹಾಗೂ ಎರಡು ಮಕ್ಕಳನ್ನು ಹೊಂದಿರುವ ಕುಟುಂಬದವರಿಗೆ ಮತ್ತು ಎನ್ಆರ್ಇಜಿಎಸ್ ರಡಿ ನೀಡಿರುವ ಜಾಬ್ಕಾರ್ಡ ಹಾಗೂ ಇತರೆ ಕಸಬುದಾರರ ದೃಢೀಕೃತ ಪತ್ರ ಹೊಂದಿರುವವರಿಗೆ ಈ ಯೋಜನೆಯಿಂದ ಅನುಕೂಲವಾಗುವುದು.

ಕ್ರೀಡಾಪಟುಗಳಿಗೆ ರೂಪಿಸಿರುವ ಯೋಜನೆಗಳು

351(624);. ಶ್ರೀ ಐಹೊಳೆ.ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ರೂಪಿಸಿರುವ ಯೋಜನೆಗಳಾವುವು, ಅವುಗಳ ರೂಪುರೇಷೆಗಳೇನು (ಯೋಜನಾವಾರು ವಿವರ ಒದಗಿಸುವುದು);

ಆ) ಸರ್ಕಾರಿ ನೌಕರಿಯಲ್ಲಿರುವ ಕ್ರೀಡಾಪಟುಗಳಿಗೆ ವಿಶೇಷ ಸೌಲಭ್ಯಗಳೇನಾದರು ಸರ್ಕಾರ ಕಲ್ಪಿಸಿದೆಯೇ (ವಿವರ ಒದಗಿಸುವುದು);

ಇ) ರಾಜ್ಯದಲ್ಲಿ ಎಷ್ಟು ಅಸಹಾಯಕ ಕ್ರೀಡಾಪಟುಗಳನ್ನು ಸರ್ಕಾರ ಗುರುತಿಸಿದೆಯೇ; ಸದರಿ ಕ್ರೀಡಾಪಟುಗಳ ನೆರವಿಗೆ ಸರ್ಕಾರ